ನ್ಯಾಯಬೆಲೆ ಅಂಗಡಿಗಳಲ್ಲಿ ಗುಣಮಟ್ಟದ ಆಹಾರಧಾನ್ಯ ಸರಬರಾಜು ಕುರಿತು.

187(2137)

ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನ್ಯಾಯ ಬೆಲೆ ಅಂಗಡಿಗಳಲ್ಲಿ ಕಳಪೆ ಮಟ್ಟದ ಅಕ್ಕಿಯನ್ನು ಸರಬರಾಜು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ನ್ಯಾಯಬೆಲೆ ಅಂಗಡಿಗಳಲ್ಲಿ ಸಕ್ಕರೆಯನ್ನು ಪಡೆಯಲು ಅಕ್ಕಿಯನ್ನು ಕಡ್ಡಾಯವಾಗಿ ಕೊಳ್ಳಲೇಬೇಕು ಎಂದು ಅಂಗಡಿ ಮಾಲೀಕರು ರೇಷನ್ ಕಾರ್ಡುದಾರರನ್ನು ಬಲವಂತಪಡಿಸುತ್ತಿರುವುದು ನಿಜವೇ? ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಇ) ಉತ್ತಮ ಗುಣಮಟ್ಟದ ಅಕ್ಕಿಯನ್ನು ಸರಬರಾಜು ಮಾಡಲು ಸರ್ಕಾರದ ಕ್ರಮಗಳೇನು?

ಈ) ಈ ಅಂಗಡಿಗಳಲ್ಲಿ ಸೀಮೆಎಣ್ಣೆಯನ್ನು ಪಡೆಯಲು ಕಾರ್ಡುದಾರರು ಬೆಳಗಿನ ಜಾವ 5 ಗಂಟೆಗೆ ಸರತಿ ಸಾಲಿನಲ್ಲಿ ನಿಲ್ಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದರಿಂದ ಬಡ ಮತ್ತು ಮಧ್ಯಮ ವರ್ಗದ ಜನರು ತಮ್ಮ ಕೆಲಸಕಾರ್ಯಗಳನ್ನು ಬಿಟ್ಟು ಸೀಮೆಎಣ್ಣೆ ಪಡೆಯಲು ಕ್ಯೂಗಳಲ್ಲಿ ನಿಲ್ಲುತ್ತಿದ್ದು ಇದನ್ನು ತಪ್ಪಿಸಿ ದಿನಪೂರ್ತಿ ಸೀಮೆಎಣ್ಣೆ ಒದಗಿಸಲು ಸರ್ಕಾರ ಕ್ರಮಕೈಗೊಳ್ಳಲಿದೆಯೇ?

ಉ) ಈ ಕ್ರಮವನ್ನು ಎಂದಿನಿಂದ ಜಾರಿಗೆ ತರಲಾಗುವುದು?

ಶ್ರೀ ಡಿ.ಬಿ.ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು):

ಅ) ಇಲ್ಲ.

ಆ) ಇಲ್ಲ.

ಇ) ಭಾರತ ಆಹಾರ ನಿಗಮದ ಗೋದಾಮುಗಳಿಂದ ಆಹಾರ ಧಾನ್ಯಗಳನ್ನು ಎತ್ತುವಳಿ ಮಾಡುವಾಗ ಸಂಬಂಧಿಸಿದ ಉಪನಿರ್ದೇಶಕರು ಪ್ರತಿ ಗೋದಾಮಿಗೂ ಭೇಟಿ ನೀಡಿ, ಲಭ್ಯವಿರುವ ಆಹಾರ ಧಾನ್ಯಗಳ ದಾಸ್ತಾನನ್ನು ಪರಿಶೀಲಿಸಿ ಉತ್ತಮ

ಗುಣಮಟ್ಟದ ಅಕ್ಕಿಯನ್ನು ಬೇರ್ಪಡಿಸಿ ನಂತರ ಸಗಟು ನಾಮನಿದಾರರುಗಳು ಉತ್ತಮ ಗುಣಮಟ್ಟದ ಅಕ್ಕಿಯನ್ನು ಮಾತ್ರ ಎತ್ತುವಳಿ ಮಾಡಲು ಕ್ರಮ ವಹಿಸುವಂತೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಹಾಗೂ ಸಗಟು ನಾಮನಿದಾರರುಗಳಿಗೂ ಸೂಚನೆಗಳನ್ನು ನೀಡಲಾಗಿದೆ. ಒಂದು ವೇಳೆ ಕಳಪೆ ಗುಣಮಟ್ಟದ ಅಕ್ಕಿಯನ್ನು ಎತ್ತುವಳಿ ಮಾಡಿದ್ದಲ್ಲಿ, ಆ ಅಕ್ಕಿಯನ್ನು ಭಾರತ ಆಹಾರ ನಿಗಮಕ್ಕೆ ಹಿಂದಿರುಗಿಸಲು ಸಹ ಸೂಚಿಸಿದೆ.

ಈ) ಸರ್ಕಾರದ ಗಮನಕ್ಕೆ ಬಂದಿರುತ್ತದೆ. ನ್ಯಾಯಬೆಲೆ ಅಂಗಡಿಗಳಲ್ಲಿ ಹಾಗೂ ಸೀಮೆಎಣ್ಣೆ ಚಿಲ್ಲರೆ ಮಳಿಗೆಗಳಲ್ಲಿ ಬೆಳಿಗ್ಗೆ 8 ಗಂಟೆಯಿಂದ ಸೀಮೆಎಣ್ಣೆಯ ವಿತರಣೆಯನ್ನು ಕಾರ್ಡುದಾರರಿಗೆ ವಿತರಣೆಯನ್ನು ಮಾಡಲಾಗುತ್ತಿದೆ. ಕೈಗಾಡಿಗಳ ಮೂಲಕ ಸೀಮೆಎಣ್ಣೆಯನ್ನು ವಿತರಿಸುವವರು ಕ್ರಮಬದ್ಧವಾಗಿ ಸೀಮೆಎಣ್ಣೆಯನ್ನು ವಿತರಿಸದಿರುವ ಆರೋಪಗಳು ಕೇಳಿ ಬರುತ್ತಿದ್ದ ಹಿನ್ನೆಲೆಯಲ್ಲಿ ಜನವರಿ 2001ನೇ ಮಾಹೆಯಿಂದ ಈ ಪದ್ಧತಿಯನ್ನು ಸರ್ಕಾರದಿಂದ ರದ್ದುಪಡಿಸಿ ಕೈಗಾಡಿ ವಿತರಕರು ಚಿಲ್ಲರೆ ಪರವಾನಗಿ ಪಡೆಯಲು ತಿಳಿಸಲಾಗಿದೆ.

ಉ) ಮಾನ್ಯ ಉಚ್ಚನ್ಯಾಯಾಲಯದಿಂದ ತಡೆಯಾಜ್ಞೆ ಇರುವ ಪ್ರಯುಕ್ತ ಕೈಗಾಡಿ ವಿತರಣಾ ಪದ್ಧತಿಯ ರದ್ದಿಯಾತಿ ಆದೇಶ ಜಾರಿಗೊಳಿಸಲಾಗಿಲ್ಲ. ಆದರೆ ತರವಿಗೆ ಪ್ರಯತ್ನಿಸುತ್ತಿದ್ದು, ತಡೆಯಾಜ್ಞೆ ತೆರವಾದ ಕೂಡಲೇ ಜಾರಿಗೆ ತರಲಾಗುವುದು.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ(ಅ) ಪ್ರಶ್ನೆಗೆ ಇಲ್ಲವೆಂದು ಉತ್ತರಿಸಿರುತ್ತಾರೆ. ಆದರೆ ಇದು ಬಹಳಷ್ಟು ಕಡೆ ನಡೆಯುತ್ತಿದೆ, ಸಕ್ಕರೆಯನ್ನು ನಾವು ತೆಗೆದುಕೊಳ್ಳಬೇಕಾದರೆ ಇಂತಿಷ್ಟು ಅಕ್ಕಿಯನ್ನು ತೆಗೆದುಕೊಳ್ಳಬೇಕೆಂದು ನಡೆಯುತ್ತಿದೆ. ಆದರೆ ಬಹುಶಃ ಇದು ನಿಮ್ಮ ಗಮನಕ್ಕೆ ಬಂದಿರಲಿಕ್ಕಿಲ್ಲ. ಆದರೆ ಇದನ್ನು ಎನ್‌ಕ್ವಯರಿ ಮಾಡಿದರೆ ನಿಮಗೆ ತಿಳಿಯುತ್ತದೆ. ಆ ರೀತಿಯಾಗಿ ನಡೆಯುತ್ತಿದ್ದರೆ ಆ ಪಡಿತರ ಅಂಗಡಿಯ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಉತ್ತಮ ಗುಣಮಟ್ಟದ ಅಕ್ಕಿಯನ್ನು ಸರಬರಾಜು ಮಾಡುವುದರ ಬಗ್ಗೆ ತಾವು ಒಂದೆರಡು ಅಂಶಗಳನ್ನು ಹೇಳಿದ್ದೀರಿ, ಜಿಲ್ಲಾಧಿಕಾರಿಗಳ ಕಛೇರಿಯಲ್ಲಿರುವ ಆಹಾರ ವಿಭಾಗದಲ್ಲಿ ಸಾರ್ವಜನಿಕರಿಗೆ ಪಡಿತರವನ್ನು ತೋರಿಸುವ ವ್ಯವಸ್ಥೆಯಾಗಬೇಕು. ಇದರ ಬಗ್ಗೆ ತಾವು ಕ್ರಮವನ್ನು ಕೈಗೊಳ್ಳುತ್ತಿದ್ದೀರಿ, ಭಾರತೀಯ ಆಹಾರ ನಿಗಮದಿಂದ ಅವರು ಒಳ್ಳೆಯ ಗುಣಮಟ್ಟದ ಅಕ್ಕಿಯನ್ನು ಕೊಂಡು ಕೊಂಡರೂ ಸಹ ರಾಜ್ಯ ಏಜೆನ್ಸಿಗೆ ಸರಬರಾಜು ಆಗುತ್ತಿರುವ ಸಮಯದಲ್ಲಿ ಈ ಮಧ್ಯೆದಲ್ಲಿ ಗೋಲ್‌ಮಾಲ್ ಆಗಿ ಒಳ್ಳೆಯ ಅಕ್ಕಿಯನ್ನು ಖಾಸಗಿಯವರಿಗೆ ಮಾರಾಟ ಮಾಡಿ ಕಳಪೆ ಅಕ್ಕಿಯನ್ನು ಅಲ್ಲಿಡುವಂತಹ ವ್ಯವಸ್ಥೆಯಾಗುತ್ತಿದೆ. ಇದರ ಬಗ್ಗೆ ನೀವು ಎನ್‌ಕ್ವಯರಿ ಮಾಡಿದರೆ ಕಳಪೆ ಮಟ್ಟದ ಅಕ್ಕಿ ಕೆಲವು ಕಡೆ ಬರುವುದು ನಿಲ್ಲುವುದಕ್ಕೆ

ಸಾಧ್ಯವಾಗುತ್ತದೆ. ಆಹಾರ ನಿಗಮದವರು ಕಳಪೆ ಮಟ್ಟದ ಅಕ್ಕಿಯನ್ನು ಕೊಡುತ್ತಾರೆಂದು ಸಾರ್ವಜನಿಕರಿಗೆ ಒಂದು ತಪ್ಪು ಅಭಿಪ್ರಾಯ ಬರುತ್ತದೆ. ಇದರ ಬಗ್ಗೆ ನೀವು ಒಂದು ಇನ್‌ವೆಸ್ಟಿಗೇಷನ್ ಮಾಡಿ ಕ್ರಮ ಕೈಗೊಂಡರೆ ಕಳಪೆ ಮಟ್ಟದ ಅಕ್ಕಿಯ ಸರಬರಾಜು ಹೋಗುತ್ತದೆ. ಇದರ ಬಗ್ಗೆ ಏನು ವಿಚಾರ ಮಾಡಿರುತ್ತೀರಿ ಏನ್ನುವುದರ ಬಗ್ಗೆ ತಾವು ಹೇಳಬೇಕು.

ಶ್ರೀ ಡಿ.ಬಿ.ಇನಾಂದಾರ್: ಯುಆರ್‌ಎಸ್ ಅಕ್ಕಿ ಬರುತ್ತಿರುವಂತಹ ಸಂದರ್ಭದಲ್ಲಿ ಕಟ್ಟದಾಂತಹ ಅಕ್ಕಿ ಬರುತ್ತಿತ್ತು. ಆದರೆ ಇದರ ಬಗ್ಗೆ ರಾಜ್ಯಸರ್ಕಾರವು ಪ್ರೊಟೆಸ್ಟ್ ಮಾಡಿ ಯುಆರ್‌ಎಸ್ ಅಕ್ಕಿಯನ್ನು ವಾಪಸ್ಸು ಮಾಡುತ್ತಿದ್ದೇವೆ. ಆಗ ಕೇಂದ್ರಸರ್ಕಾರದ ಮಂತ್ರಿಗಳು ಅಕ್ಕಿಯನ್ನು ವಾಪಸ್ಸು ತೆಗೆದುಕೊಂಡರು. ಇವತ್ತು ನಾವು ಯಾವ ಆಹಾರಧಾನ್ಯಗಳನ್ನು ಕೊಡುತ್ತಿರುತ್ತೇವೆ, ಅದರ ಗುಣಮಟ್ಟದ ಬಗ್ಗೆ ತನಿಖೆಯನ್ನು ಮಾಡುವುದಕ್ಕೆ ನಾವು ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ಮಾಡಿದ್ದೇವೆ. ಮಾನ್ಯ ವಿರೋಧಪಕ್ಷದ ನಾಯಕರು ಹೇಳತಕ್ಕ ವಿಚಾರದಲ್ಲಿ ಎಲ್ಲಿಯಾದರೂ ಇಂಡಿವಿಜಿಯಲ್ ಕೇಸಸ್ ಆಗಿದ್ದರೆ ಅದನ್ನು ಇನ್ಸ್‌ಪೆಕ್ಷನ್ ಮಾಡಿಸುವಂತಹ ಕೆಲಸವನ್ನು ಮಾಡಿಸುತ್ತೇನೆ. ಯಾರಾದರೂ ಇಂಡಿವಿಜಿಯಲ್ ಡೀಲರ್ಸ್ ಅಥವಾ ಹೋಲ್‌ಸೇಲರ್ಸ್ ಇಂತಹ ಕೆಟ್ಟ ಕೆಲಸ ಮಾಡುತ್ತಿದ್ದರೆ ಅವರ ಮೇಲೆ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಮತ್ತೊಂದು, ಸೀಮೆಎಣ್ಣೆ ವಿಚಾರ. ಸೀಮೆಎಣ್ಣೆ ತೆಗೆದುಕೊಳ್ಳಬೇಕಾದರೆ ಬೆಳಿಗಿನಜಾವ 5 ಗಂಟೆಗೆ ಕ್ಯೂ ನಿಲ್ಲುವಂತಹ ಪರಿಸ್ಥಿತಿ ಇದೆ. ಅದರ ಬಗ್ಗೆ ನಾನೊಂದು ಪ್ರಶ್ನೆಯನ್ನು ಕೇಳಿದ್ದೇನೆ, ಅದನ್ನು ತಾವು ಒಪ್ಪಿಕೊಂಡಿದ್ದೀರಿ. ಕೆಲವು ಜನರಿಗೆ ಸೀಮೆಎಣ್ಣೆ ಪಡೆಯಲಿಕ್ಕೆ ತೊಂದರೆಯಾಗತ್ತಿದೆ ಎಂದು ಒಪ್ಪಿಕೊಂಡಿದ್ದೀರಿ. ಸೀಮೆಎಣ್ಣೆ ಕೊಡಲಿಕ್ಕೆ ಬೆಳಿಗ್ಗೆ 8 ಗಂಟೆಗೆ ಪ್ರಾರಂಭ ಮಾಡುತ್ತಾರೆ. ಅದು ವಾರದಲ್ಲಿ ಒಂದೆರಡು ಸಲ ಕೊಡುತ್ತಾರೆ. ಹೀಗಾಗಿ ಬೆಳಿಗಿನ ಟೈಮ್ ಸೀಮೆಎಣ್ಣೆ ಕೊಡುವುದರಿಂದ ಬೆಳಿಗ್ಗೆ 5 ಗಂಟೆಗೆ ಕೂಲಿ ಕಾರ್ಮಿಕರು ಹೆಂಗಸರು ಬಂದು ಕ್ಯೂ ನಿಲ್ಲುವಂತಹ ಪರಿಸ್ಥಿತಿ ಇದೆ. 2-3 ತಾಸು ಸೀಮೆಎಣ್ಣೆ ಕೊಟ್ಟು ಆಮೇಲೆ ಬಂದ್ ಮಾಡುತ್ತಾರೆ. ಆದರೆ ಅದರ ಬದಲು ಇದಕ್ಕೆ ಏನಾದರೂ ಒಂದು ಪರಿಹಾರ ಕಂಡುಕೊಳ್ಳಬೇಕು. ಬಡ ಜನರಿಗೆ ಒಳ್ಳೆಯದಾಗ ಬೇಕಾದರೆ ಒಂದು ದಿವಸ ಫುಲ್‌ಡೇ ಬೆಳಿಗ್ಗೆ 10 ಗಂಟೆಯಿಂದ ಸಾಯಂಕಾಲ 6-7 ಗಂಟೆಯವರೆಗೆ ಸೀಮೆಎಣ್ಣೆ ಕೊಡುವಂತಹ ವ್ಯವಸ್ಥೆ ಮಾಡಿದರೆ ಎಲ್ಲರಿಗೂ ಅನುಕೂಲವಾಗುತ್ತದೆ. ಶನಿವಾರ ಅಥವಾ ಭಾನುವಾರಕೊಡುವ ವ್ಯವಸ್ಥೆ ಮಾಡಿದರೆ ಅನುಕೂಲವಾಗುತ್ತದೆ. ಆ ರೀತಿ ಮಾಡಬೇಕೆಂದು ನಾನು ಸೂಚನೆ ಕೊಡುತ್ತೇನೆ.

ಶ್ರೀ ಡಿ.ಬಿ.ಇನಾಂದಾರ್: ಮಾನ್ಯ ಅಧ್ಯಕ್ಷರೆ, ಮೊದಲು ಹಾಕರ್ಸ್ ಇರತಕ್ಕ

ಸಂದರ್ಭದಲ್ಲಿ ಜನರಿಗೆ ಬಹಳಷ್ಟು ತೊಂದರೆಯಾಗುತ್ತದೆನ್ನುವ ಮಾತನ್ನು ಗಮನದಲ್ಲಿಟ್ಟುಕೊಂಡು ಹಾಕರ್ಸ್ ವ್ಯವಸ್ಥೆಯನ್ನು ಬಂದ್ ಮಾಡಬೇಕು, ಸೀಮೆಎಣ್ಣೆಯನ್ನು ನ್ಯಾಯಬೆಲೆ ಅಂಗಡಿಗಳ ಮೂಲಕ ಮಾರಾಟ ಮಾಡಬೇಕೆಂದು ಕನ್ವರ್ಟ್ ಮಾಡಲಾಗಿದೆ. ಅದರ ಬಗ್ಗೆ ಸುಮಾರು 400 ಜನ ಹಾಕರ್ಸ್ ಹೈಕೋರ್ಟ್‌ನಲ್ಲಿ ಸ್ಟೇ ತೆಗೆದುಕೊಂಡಿದ್ದಾರೆ. ಅದನ್ನು ವೆಕೇಟ್ ಮಾಡಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಸರ್ಕಾರದಿಂದ ಆದೇಶವನ್ನು ಹೊರಡಿಸಿದ್ದು ಏನೆಂದರೆ, ಬೆಳಿಗ್ಗೆ 8 ಗಂಟೆಯಿಂದ ಕೊಡಬೇಕು 5 ಗಂಟೆಗೆ ಕೊಡುವುದಿಲ್ಲವೆಂದು ಸರ್ಕಾರದಿಂದ ಈಗಾಗಲೇ ಎಲ್ಲರಿಗೂ ಕ್ಲಾರಿಫಿಕೇಷನ್ ಕಳುಹಿಸಿದ್ದೇವೆ. ಆ ವಿಚಾರವನ್ನು ಮಾನ್ಯ ವಿರೋಧಪಕ್ಷದ ನಾಯಕರ ಗಮನಕ್ಕೆ ತರಲಿಕ್ಕೆ ಬಯಸುತ್ತಿದ್ದೇನೆ. ಒಂದು ವೇಳೆ ಇದರಲ್ಲಿ ಏನಾದರೂ ನ್ಯೂನ್ಯತೆಗಳು ಇದ್ದರೆ ಸರಿಪಡಿಸುತ್ತೇವೆ. ಜನರ ಕಡೆಯಿಂದ ಏನಾದರೂ ದೂರುಗಳು ಬಂದಲ್ಲಿ ಎನ್‌ಕ್ವಯರಿ ಮಾಡುತ್ತಿದ್ದೇವೆನ್ನುವ ಮಾತನ್ನು ಅವರಿಗೆ ತಿಳಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ತಾವು 8 ಗಂಟೆಗೆ ಇಟ್ಟಿದ್ದೀರಿ. ಆದರೆ ಜನರು ಕೂಲಿಕಾರ್ಮಿಕರು ಸೀಮೆಎಣ್ಣೆ ಸಿಗುತ್ತದೋ ಇಲ್ಲವೋ ಎನ್ನುವ ಭಯದಿಂದ 5 ಗಂಟೆಗೆ ಕ್ಯೂ ನಿಲ್ಲುತ್ತಾರೆ. ಆದರೆ ನೀವು ಸೀಮೆಎಣ್ಣೆ ಕೊಡುವುದು ಎರಡು ಮೂರು ಗಂಟೆ ಮಾತ್ರ. ಅದಕ್ಕೆ ಅವರು ಬೇಗ ಬಂದು ಕ್ಯೂ ನಿಲ್ಲುತ್ತಾರೆ. ಅದಕ್ಕೆ ನೀವು ಫುಲ್‌ಡೇ ಸೀಮೆಎಣ್ಣೆ ಕೊಡುವ ವ್ಯವಸ್ಥೆ ಮಾಡಿ. ಅದನ್ನು ಪ್ರಯೋಗ ಮಾಡಿ ನೋಡಿ.

ಶ್ರೀ ಡಿ.ಬಿ.ಇನಾಂದಾರ್: ಸೀಮೆಎಣ್ಣೆ ಕೊಡಲಿಕ್ಕೆ ನಾವು ಕೂಪನ್ ಕೊಡತಕ್ಕ ವ್ಯವಸ್ಥೆಯನ್ನು ಮಾಡಿದ್ದೇವೆ. ಆ ಕೂಪನ್ ಅನ್ನು ಮತ್ತೆ ವಾಪಸ್ಸು ತೆಗೆದುಕೊಳ್ಳತಕ್ಕ ಒಂದು ಪದ್ಧತಿ ನಮ್ಮಲ್ಲಿದೆ. ಎಷ್ಟು ಕೂಪನ್‌ಗಳಿಗೆ ಸೀಮೆಎಣ್ಣೆ ತೆಗೆದುಕೊಳ್ಳುತ್ತಾರೆ ಅಷ್ಟೆ ಜನರಿಗೆ ಸೀಮೆಎಣ್ಣೆ ಕೊಡತಕ್ಕ ಪದ್ಧತಿ ಇದೆ. ಆದರೆ ಇಷ್ಟೆ ಗಂಟೆ ಕೊಡಬೇಕೆನ್ನುವ ಪದ್ಧತಿ ಇಲ್ಲ. ನ್ಯಾಯಬೆಲೆ ಅಂಗಡಿಗಳ ಸಮಯ ಬೆಳಿಗ್ಗೆ 8ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಆಮೇಲೆ ಸಾಯಂಕಾಲ 4 ಗಂಟೆಯಿಂದ ರಾತ್ರಿ 8ಗಂಟೆಯವರೆಗೆ ಸೀಮೆಎಣ್ಣೆ ಕೊಡಬೇಕೆನ್ನುವ ಆಜ್ಞೆಯನ್ನು ಸರ್ಕಾರದಿಂದ ಹೊರಡಿಸಿದ್ದೇವೆ. ಯಾರೂ ಏನೂ ಗಾಬರಿಯಾಗಬೇಕಾಗಿಲ್ಲ. ನಾವು ಎಷ್ಟು ಕೂಪನ್ ಕೊಟ್ಟಿದ್ದೇವೆ ಅಷ್ಟು ಸೀಮೆಎಣ್ಣೆ ಕೊಡುತ್ತಿದ್ದೇವೆನ್ನುವ ಮಾತನ್ನು ಜನರಿಗೆ ಈ ಸದನದ ಮುಖಾಂತರ ತಿಳಿಸಲಿಕ್ಕೆ ಬಯಸುತ್ತೇನೆ.

ಶ್ರೀ ಎನ್.ಯೋಗೀಶ್‌ಭಟ್: ಪಟ್ಟಣ ಪ್ರದೇಶಗಳಲ್ಲಿ ಯಾರು ಎಲ್‌ಪಿಜಿ ಗ್ಯಾಸ್ ಉಪಯೋಗ ಮಾಡುತ್ತಿದ್ದಾರೆ ಅವರನ್ನು ಬಿಟ್ಟು ಯಾರು ಉಪಯೋಗ ಮಾಡುತ್ತಿಲ್ಲ ಅಂತಹ ಕಾರ್ಡ್‌ಗಳನ್ನು ಗುರುತಿಸಿ 28 ಸಾವಿರ ಕಾರ್ಡ್‌ಗಳಿವೆಯೆಂದು ಹೇಳಿದರೂ

ಸಹ ತಮ್ಮ ಕಡೆಯಿಂದ ಕೂಪನ್ ಬಂದಿರುವುದು ಕೇವಲ 18ಸಾವಿರ. ಸೀಮೆಎಣ್ಣೆಯನ್ನು ಕೊಡುವಂತಹ ಕೂಪನ್‌ನಲ್ಲಿ ವಿತರಣೆಯಲ್ಲಿ ಸಹ ತಾರತಮ್ಯವಾಗುತ್ತಿದೆ. ಅದರಿಂದ ಸಮಸ್ಯೆಗಳು ಉದ್ಭವವಾಗುವುದು ನಿಜ. ಇದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಡಿ.ಬಿ.ಇನಾಂದಾರ್: ಕೇಂದ್ರಸರ್ಕಾರದಿಂದ ಎಲ್‌ಪಿಜಿ ಗ್ಯಾಸ್ ಇದ್ದವರಿಗೆ ಅದರಲ್ಲೂ ಎರಡು ಸಿಲಿಂಡರ್ ಇದ್ದವರಿಗೆ ಸೀಮೆಎಣ್ಣೆ ಕೊಡಬಾರದೆಂದು ಆಜ್ಞೆ ಬಂದ ಕಾರಣ, ಅದರ ಜೊತೆಗೆ ನಮಗೆ ಕೊಡತಕ್ಕ ಕೋಟಾ ಕೂಡ ಕಡಿಮೆ ಮಾಡಿದ್ದಾರೆ. ಒಂದು ಸಿಲಿಂಡರ್ ಇದ್ದವರಿಗೆ ಕೇವಲ ಎರಡುಲೀಟರ್ ಸೀಮೆಎಣ್ಣೆ ಕೊಡುವ ಪದ್ಧತಿ ಇರುವುದರಿಂದ ಕೂಪನ್ ಕೊಡುವಾಗ ಎಷ್ಟು ಕನೆಕ್ಷನ್‌ಗಳಿವೆ ಅವುಗಳನ್ನು ಕಡಿಮೆ ಮಾಡಿ ಕೂಪನ್‌ಗಳನ್ನು ಕೊಡುತ್ತಿದ್ದೇವೆ.

ಶ್ರೀ ಸಿ.ಚನ್ನಿಗಪ್ಪ: ಮಾನ್ಯ ಆಹಾರ ಸಚಿವರು ಉತ್ತಮವಾದ ಉತ್ತರವನ್ನು ಕೊಟ್ಟಿದ್ದಾರೆ. ತುಮಕೂರು ಜಿಲ್ಲೆಯಲ್ಲಿ ಜಿಲ್ಲಾಮಟ್ಟದಲ್ಲಿ ಫುಡ್ ಡಿಸ್ಟ್ರಿಬ್ಯೂಷನ್‌ನಲ್ಲಿ ಸುಮಾರು ಲಕ್ಷಾಂತರ ಟನ್ ಅಕ್ಕಿ ಅವ್ಯವಹಾರವಾಗಿದೆ.

ಅಧ್ಯಕ್ಷರು: ತಾವು ಬೇರೆ ಪ್ರಶ್ನೆ ಕೇಳಿ. ಈಗ ತುಮಕೂರು ಜಿಲ್ಲೆಯ ಉತ್ತರ ಅವರ ಹತ್ತಿರ ಎಲ್ಲಿದೆ?

ಶ್ರೀ ಸಿ.ಚನ್ನಿಗಪ್ಪ: ನಾನು ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ. ಲಕ್ಷಾಂತರ ಟನ್ ಅಕ್ಕಿ ಅವ್ಯವಹಾರವಾಗಿದೆ. ಅದರ ಬಗ್ಗೆ ಎನ್‌ಕ್ವೈರಿ ಮಾಡಿದ್ದಾರೆ. ತಾವು ಹೇಳಿದ ಹಾಗೆ ಸಪರೇಟ್ ಪ್ರಶ್ನೆ ಕೇಳುತ್ತೇನೆ. ನಮ್ಮಲ್ಲಿ ಶಾಲಾ ಮಕ್ಕಳಿಗೆ ಕೊಡುವಂತಹ ಅಕ್ಕಿ ಕಳಪೆಮಟ್ಟದ್ದಾಗಿದೆ, ಅದನ್ನು ಸರಿಯಾದ ಸಮಯಕ್ಕೆ ಸಪ್ಲೈ ಮಾಡುತ್ತಿಲ್ಲವೆಂದು ನಮ್ಮ ತಾಲ್ಲೂಕಿನಲ್ಲಿ ಅನೇಕ ಜನ ದೂರಿದ್ದಾರೆ. ಅದನ್ನು ಪರಿಶೀಲನೆ ಮಾಡಬೇಕು, ಕ್ರಮವಾಗಿ ಅಕ್ಕಿಯನ್ನು ವಿತರಣೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಬೆಂಗಳೂರು ಮಹಾನಗರ ಪಾಲಿಕೆಗೆ ಸ್ವಯಂ ಆಸ್ತಿ ತೆರಿಗೆಯಿಂದ ಬಂದ ವರಮಾನ.

188(1980)

ಶ್ರೀ ರಾಮಲಿಂಗಾರೆಡ್ಡಿ(ಜಯನಗರ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ